ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಶೇಷ
ನ್ಯಾಯಾಧೀಶರ ನ್ಯಾಯಾಲಯ, ಹಾಸನ

ಸ್ಪೆಷಲ್ ಕೇಸ್ ನಂಃ**78/2018**

| | ಚಾಸಾಃ **26** | ಅಸಾಃ **9** |
|---|---|---|
| ಹೆಸರು | ಜಗದೀಶ್ | |
| ತಂದೆಯ ಹೆಸರು **:** | ಹೆಚ್ ಕೆ ಚೆನ್ನಪ್ಪ | |
| ವಯಸ್ಸು**:** | 57 ವರ್ಷ | |
| ಕೆಲಸಃ | ಅಡಿಷನಲ್ ಎಸ್ ಪಿ ಕೋಲಾರ ಜಿಲ್ಲೆ | |
| ವಾಸಸ್ಥಳ | ಕೋಲಾರ | |

ದಿನಾಂಕಃ **13/07/2026** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಸ್‌ಪಿಪಿ ರವರಿಂದ

ನಾನು 24.01.2017 ರಿಂದ 30.09.2018 ರವರೆಗೆ ನಾನು ಡಿವೈಎಸ್‌ಪಿ ಯಾಗಿ ಸಕಲೇಶಪುರ ಉಪ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ. 14.10.2017 ರಂದು ಈ ಪ್ರಕರಣದ ಕಡತವನ್ನು ಚಾಸಾ-25 ರವರಿಂದ ಪಡೆದು ಪರಿಶೀಲನೆ ಮಾಡಿರುತ್ತೇನೆ.

2. ಅದೇ ದಿನ ಮೇರ್ವೆ ಗ್ರಾಮಕ್ಕೆ ಭೇಟಿ ಮಾಡಿ ಚಾಸಾ-2 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ನಂತರ ಚಾಸಾ-2 ರವರು ಕೃತ್ಯ ನಡೆದ ಸ್ಥಳವನ್ನು ತೋರಿಸುವುದಾಗಿ ನಮ್ಮನ್ನು ಕರೆದುಕೊಂಡು ಭಕ್ತರವಳ್ಳಿ ಮೇರ್ವೆ ಗ್ರಾಮಕ್ಕೆ ಹೋಗುವ ರಸ್ತೆ ಪಕ್ಕದಲ್ಲಿ ಯಡವನಹಳ್ಳಿ ಅಶೋಕ ರವರ ಜಮೀನಿನ ಹತ್ತಿರ ಕರೆದುಕೊಂಡು ಹೋಗಿ ಕೃತ್ಯ ನಡೆದ ಸ್ಥಳವನ್ನು ತೋರಿಸಿದ ಮೇರೆಗೆ ಪಂಚರಾದ ಚಾಸಾ-12 ಮತ್ತು 13 ರವರ ಸಮಕ್ಷಮ ಬೆಳಿಗ್ಗೆ 9.00-10.00 ಗಂಟೆ ಸಮಯದಲ್ಲಿ ನಿಪಿ-2 ರಂತೆ ಪಂಚನಾಮೆಯನ್ನು ಮಾಡಿದ್ದು, ಕೃತ್ಯ ನಡೆದ ಸ್ಥಳದಲ್ಲಿ ನೊಂದ ಬಾಲಕಿಯ ಕೆಂಪು ಬಣ್ಣದ ಸ್ವೆಟರನ್ನು ಮತ್ತು ಆರೋಪಿಗೆ ಸೇರಿದ ಕೆಂಪು ಬಣ್ಣದ 2 ಚಪ್ಪಲಿಗಳು ಮತ್ತು ಆರೋಪಿಯು ಚಾಸಾ-2 ರವರನ್ನು ಹಿಂಬಾಲಿಸಿ ಬಂದಿದ್ದ ಮೋಟಾರ್ ಸೈಕಲ್ ನಂಬರ ಕೆಎ-09-ಕೆ-8864 ಹಿರೋ ಹೊಂಡಾ ಸಿಡಿ-100

ಕಪ್ಪು ಬಣ್ಣದ ಬೈಕನ್ನು ಮಹಜರನ್ನು ಮಾಡಿ ಜಪ್ತು ಮಾಡಲಾಯಿತು. ಸಾಕ್ಷಿಯು ನಿಪಿ-2ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಈ) ಎಂದು ಗುರುತಿಸಲಾಯಿತು. ನಂತರ ಕೆಂಪುಬ್ಣದ ಸ್ವೆಟರನ್ನು ಮತ್ತು ಕೆಂಪುಬಣ್ಣದ 2 ಚಪ್ಪಲಿಗಳನ್ನು ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಿ ಸೀಲ್ ಮಾಡಿ ಎ ಎಂಬ ಅಕ್ಷರದಿಂದ ಮೊಹರು ಮಾಡಿ ಸೀಲ್ ಮಾಡಲಾಯಿತು. ಆ ಪ್ಯಾಕೆಟಿನ ಮೇಲೆ ಪಂಚರ ಹಾಗೂ ನೊಂದವರ ಹಾಗೂ ನಾನು ಸಹ ಸಹಿ ಮಾಡಿರುತ್ತೇನೆ. ಸಾಕ್ಷಿ ಮುಮಾ-1 ಮತ್ತು 2ನ್ನು ನೋಡಿ ಗುರುತಿಸಿರುತ್ತಾರೆ. ಕೃತ್ಯ ಸ್ಥಳದ ಕಚ್ಚಾ ನಕ್ಷೆಯನ್ನು ಸಹ ತಯಾರಿಸಿರುತ್ತೇನೆ. ನಕ್ಷೆ ನಿಪಿ-3 ರಲ್ಲಿ ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-3(ಈ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ಫೋಟೋ ತೆಗೆಯಲಾಗಿರುತ್ತದೆ.

ನಂತರ ಚಾಸಾ-1 ರವರ ಮರು ಹೇಳಿಕೆಯನ್ನು ಪಡೆದಿರುತ್ತೇನೆ. ಸಾಕ್ಷಿದಾರರಾದ ಚಾಸಾ-3, 4, 6, 7, 9 ಮತ್ತು 10 ರವರುಗಳನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತೇನೆ. ಆರೋಪಿಯು ತಲೆ ಮರೆಸಿಕೊಂಡಿದ್ದು ಕಂಡು ಬಂದಿರುತ್ತದೆ. ಆರೋಪಿಯ ಪತ್ತೆಗೆ ಪಿ.ಐ ಹಾಗೂ ಇತರೆ ಸಿಬ್ಬಂದಿಯವರನ್ನು ನೇಮಿಸಿರುತ್ತೇನೆ. ಅದೇ ದಿನ ಚಾಸಾ-20 ರವರ ಹೇಳಿಕೆಯನ್ನು ಪಡೆದಿರುತ್ತೇನೆ.

ದಿ. 15.10.2017 ರಂದು ಪ್ರಕರಣಕ್ಕೆ ಸಂಬಂಧಪಟ್ಟ ಸಾಕ್ಷಿದಾರರಾದ ಚಾಸಾ-5, 8, 11 ಇವರುಗಳ ವಿಚಾರಣೆಯನ್ನು ಮಾಡಿ ಹೇಳಿಕೆ ಪಡೆದಿರುತ್ತೇನೆ. ದಿ. 16.10.2017 ರಂದು ಆರೋಪಿಯನ್ನು ಚಾಸಾ-21 ಮತ್ತು 22 ರವರು ನನ್ನ ಮುಂದೆ ಹಾಜರುಪಡಿಸಿದ್ದು, ಅರೋಪಿಯನ್ನು ವಿಚಾರಣೆ ಮಾಡಿ ಅವರ ಸ್ವ ಇಚ್ಛೆ ಹೇಳಿಕೆಯನ್ನು ಪಡೆದು ದಸ್ತಗಿರಿ ನಿಯಮ ಪಾಲಿಸಿ ಘನ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿಯನ್ನು ಹಾಜರುಪಡಿಸಿದ್ದ ಬಗ್ಗ ನಿಪಿ-5 ರಂತೆ ವರದಿ ಪಡೆದಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತ. ಸಾಕ್ಷಿ ಸಿಬ್ಬಂದಿ ಗೋಪಾಲ ಚಾಸಾ-22 ರವರ ಸಹಿಯನ್ನು ನೋಡಿ ಗುರುತಿಸಿದ್ದು ಅವರ ಸಹಿಯನ್ನು ನಿಪಿ-5(ಸಿ) ಎಂದು ಗುರುತಿಸಲಾಯಿತು.

ದಿ. 17.10.2017 ರಂದು ಚಾಸಾ-2 ಮತ್ತು ಆರೋಪಿಯವರ ಜಾತಿ ಪ್ರಮಾಣ ಪತ್ರವನ್ನು ನೀಡುವಂತೆ ಆಲೂರು ತಹಸೀಲ್ದಾರ್ ರವರಿಗೆ ಕೋರಿರುತ್ತೇನೆ. ದಿ. 24.10.2017 ರಂದು ಆರೋಪಿಯು ಕೃತ್ಯಕ್ಕೆ ಬಳಸಿದ ವಾಹನ ಸಂಖ್ಯೆ ಕೆಎ-09-ಕೆ-8864 ಬೈಕಿನ ಬಿ ಎಕ್ಸಾಕ್ಟನ್ನು ನೀಡುವಂತೆ ಉಪ ಸಾರಿಗೆ ಆಯುಕ್ತರ ಪಶ್ಚಿಮ ವಲಯ ಲಕ್ಷ್ಮೀಪುರ ಮೈಸೂರು ರವರಿಗೆ ಮನವಿ ಪತ್ರವನ್ನು ಸಲ್ಲಿಸಿರುತ್ತೇನೆ. ದಿ. 27.10.2017 ರಂದು ಚಾಸಾ-2 ರವರ ಕಲಂ 164 ರಡಿಯಲ್ಲಿ ಹೇಳಿಕೆಯನ್ನು ನೀಡುವಂತೆ ಆಲೂರಿನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಅದೇ ದಿನ ಕಲಂ 164 ಹೇಳಿಕೆಯ ಪ್ರತಿಯನ್ನು ಪಡೆದಿರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸ.ಅ. ರವರು ಸೀಲ್ ಮಾಡಿದ ಕವರನ್ನು ನ್ಯಾಯಾಲಯದ ಮುಂದೆ ತೆರೆಯಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

ಸದರಿ ದಂಡ ಸಂಹಿತೆ ಪ್ರಕ್ರಿಯಾ ಕಲಂ 164 ರ ಹೇಳಿಕೆಯನ್ನು ನಿಪಿ-9 ಎಂದು ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಹಾಗೂ ನ್ಯಾಯಾಲಯಕ್ಕೆ ಕಳುಹಿಸಿರುವ ಪ್ರತಿಯನ್ನು ನಿಪಿ-9(ಬಿ) ಎಂದು ಗುರುತಿಸಲಾಯಿತು.

ದಿ. 12.11.2017 ರಂದು ಮೈಸೂರು ಪಶ್ಚಿಮ ಉಪ ಸಾರಿಗೆ ಆಯುಕ್ತರ ಕಚೇರಿಯಿಂದ ನಿಪಿ-7 ರಂತೆ ಬಿ ಎಕ್ಸ್ಟ್ರಾಕ್ಟನ್ನು ಪಡೆದು ಪರಿಶೀಲನೆ ಮಾಡಿರುತ್ತೇನೆ. ವಾಹನದ ಮಾಲೀಕರು ಮಧುಕರ್ ಚಾಸಾ-14 ರವರು ಎಂದು ಕಂಡು ಬಂದಿರುತ್ತದೆ.

ದಿ. 17.11.2017 ರಂದು ಆಲೂರು ತಹಸೀಲ್ದಾರ್ ರವರಿಂದ ಚಾಸಾ-2 ಮತ್ತು ಆರೋಪಿಯವರ ಜಾತಿ ದೃಢೀಕರಣ ಪತ್ರ ನಿಪಿ-6 ರಂತೆ ಪಡೆದಿರುತ್ತೇನೆ. ಸಾಕ್ಷಿ ನಿಪಿ-6 ನ್ನು ನೋಡಿ ಗುರುತಿಸಿರುತ್ತಾರೆ.

ದಿ. 01.12.2017 ರಂದು ಆರೋಪಿಯು ಕೃತ್ಯಕ್ಕೆ ಬಳಸಿದ ವಾಹನದ ಮಾಲೀಕರಾದ ಚಾಸಾ-14 ರವರ ಹೇಳಿಕೆಯನ್ನು ದಾಖಲಿಸಿರುತ್ತೇನೆ. ನಂತರ ಚಾಸಾ-14 ರವರು ನಿಸ್ಸಾರ್ ಅಹಮ್ಮದ್ ಎಂಬುವವರಿಗೆ ಸದರಿ ಮೋಟಾರ್ ಬೈಕನ್ನು ಮಾರಾಟ ಮಾಡಿರುವ ಬಗ್ಗೆ ಹೇಳಿದ್ದು, ಆ ಸಂಬಂಧ ವಾಹನ ಖರೀದಿ ಮಾಡಿದ ಚಾಸಾ-15 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ಅದೇ ರೀತಿ ಚಾಸಾ-15

ರವರಿಂದ ವಾಹನವನ್ನು ಖರೀದಿಸಿರುವ ಚಾಸಾ-16 ರವರ ಹೇಳಿಕೆಯನ್ನು ಪಡೆದಿರುತ್ತೇನೆ.

ದಿ. 12.12.2017 ಚಾಸಾ-2 ರವರ ಗಾಯದ ಪ್ರಮಾಣ ಪತ್ರವನ್ನು ನಿಪಿ-4 ರಂತೆ ಆಲೂರು ಸರ್ಕಾರಿ ಆಸ್ಪತ್ರೆ ವೈದ್ಯಾಧಿಕಾರಿಯವರಿಂದ ಪಡೆದಿರುತ್ತೇನೆ. ಸಾಕ್ಷಿಯು ನಿಪಿ-4 ನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು. ತನಿಖೆ ಪೂರೈಸಿ ಆರೋಪಿ ಮೇಲೆ ದೋಷಾರೋಪಣಾ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:

ಕಡತ ಪಡೆದ ಕೂಡಲೇ ಕೃತ್ಯ ಸ್ಥಳಕ್ಕೆ ಹೋಗಿರುತ್ತೇನೆ. ಆ ಏರಿಯಾಕ್ಕೆ ಯಾರು ಬೀಟ್ ಪೊಲೀಸ್ ಎಂದು ವಿಚಾರಣೆ ಮಾಡಿಲ್ಲ, ಯಾರು ಬೀಟ್ ಪೊಲೀಸ್ ಎಂದು ಮಾಹಿತಿ ಇರುತ್ತದೆ. ಪಿ ಎಸ್ ಐ ರವರನ್ನು ಕೃತ್ಯ ನಡೆದ ಸ್ಥಳಕ್ಕೆ ಹೋಗುವುದಕ್ಕಿಂತ ಮುಂಚಿತವಾಗಿ ಬೀಟ್ ಪೊಲೀಸ್ ರವರ ಬಗ್ಗೆ ವಿಚಾರಣೆ ಮಾಡಿರಬಹುದು ಈಗ ತುಂಬಾ ದಿನಗಳಾಗಿರುವುದರಿಂದ ನೆನಪಿಲ್ಲ. ಗಸ್ತಿನ ಪೊಲೀಸಿಗೂ ಈ ಪ್ರಕಣಕ್ಕೂ ಯಾವ ರೀತಿ ಸಂಬಂಧವಿದೆ ಎಂದು ಗೊತ್ತಾಗುತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

ಕೃತ್ಯ ನಡೆದ ಸ್ಥಳ ಠಾಣೆಯಿಂದ 20 ಕಿ.ಮೀ ಇರುತ್ತದೆ. ವಾಹನದ ಮುಖಾಂತರ ಕೃತ್ಯ ನಡೆದ ಸ್ಥಳಕ್ಕೆ ವಾಹನದ ಮುಖಾಂತರ ಹೋಗಿರುತ್ತೇನೆ. ಸದರಿ ಸ್ಥಳದ ಬಗ್ಗೆ ರೆವಿನ್ಯೂ ದಾಖಲಾತಿಗಳನ್ನು ನಾನು ಪರಿಶೀಲನೆ ಮಾಡಿರುವುದಿಲ್ಲ. ನಾನು ಅಲ್ಲಿಗೆ ಹೋದ ನಂತರ ಪಂಚರನ್ನು ಕರೆಸಿರುತ್ತೇನೆ. ಸ್ಥಳಕ್ಕೆ ಹೋಗುವಾಗ ನನ್ನ ಜೊತೆ ನನ್ನ ರೈಟರ್, ವಾಹನದ ಚಾಲಕರು ಜೊತೆಯಲ್ಲಿದ್ದರು. ನನ್ನ ಜೊತೆ ಬಂದಿರುವ ರೈಟರ್, ವಾಹನದ ಸಂಖ್ಯೆ, ವಾಹನದ ಚಾಲಕರ ಬಗ್ಗೆ ನಾನು ಮಹಜರಿನಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ನೊಂದ ಮಹಿಳೆ ಸ್ಥಳ ತೋರಿಸಿದ ಮೇರೆಗೆ ಪಂಚರ ಸಮಕ್ಷಮ ಸ್ಥಳ ಮಹಜರ್ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

ಚಾಸಾ-2 ರವರು ಯಾವ ಕಾಲೇಜುನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಳು, ಸದರಿ ದಿನದ ಕಾಲೇಜಿಗೆ ಹಾಜರಾದ ಬಗ್ಗೆ ಹಾಜರಾತಿ ಬಗ್ಗೆ, ಬಸ್ ಪಾಸ್ ಬಗ್ಗೆ

ದಾಖಲಾತಿ ಪಡೆದಿಲ್ಲ. ಸಾಕ್ಷಿ ಮುಂದವರಿದು ಆದರೆ ಚಾಸಾ-2 ರವರ ಸಹಪಾಠಿಯ ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ಚಾಸಾ-2 ರವರ ಸಹಪಾಠಿ ತನ್ನ ಹೇಳಿಕೆಯಲ್ಲಿ ಚಾಸಾ-2 ರವರು ವಿದ್ಯಾಭ್ಯಾಸ ಮಾಡುತ್ತಿದ್ದ ಕಾಲೇಜು, ಕಾಲೇಜಿಗೆ ಹಾಜರಾದ ಬಗ್ಗೆ ಹಾಜರಾತಿಯ ದಾಖಲು, ಬಸ್ ಪಾಸ್ ಬಗ್ಗೆ ತಿಳಿಸಿರುತ್ತಾಳಾ ಎಂದರೆ ತಿಳಿಸಿರುವುದಿಲ್ಲ ಆದರೆ ಕಾಲೇಜಿನಿಂದ ಒಟ್ಟಿಗೆ ಬಂದ ಬಗ್ಗೆ ತಿಳಿಸಿರುತ್ತಾಳೆ ಎಂದು ಸಾಕ್ಷಿ ನುಡಿಯುತ್ತಾರೆ. ಇಬ್ಬರು ಕಾಲೇಜಿಗೆ ಹೋಗಿ ಬಂದಿರುವ ಬಗ್ಗೆ ಯಾವುದೇ ದಾಖಲಾತಿ ಪಡೆದಿರುವುದಿಲ್ಲ ಆದರೆ ಹೇಳಿಕೆಯಲ್ಲಿ ತಿಳಿಸಿರುತ್ತಾರೆ.

ಮಹಜರ್ ಸಮಯದಲ್ಲಿ ನಾನು ಬರವಣಿಗೆಗಾರ, ಚಾಸಾ-2 ಪಂಚರನ್ನು ಬಿಟ್ಟು ಬೇರೆಯವರು ಇದ್ದ ಬಗ್ಗೆ ನೆನಪಿಲ್ಲ. ಪ್ರಕರಣ ದಾಖಲು ಆದ ನಂತರವೇ ನಾನು ಸ್ಥಳಕ್ಕೆ ಹೋಗಿರುತ್ತೇನೆ ಎಂದರೆ ಸರಿ. ಮುಮಾ-1 ಮತ್ತು 2 ರ ಮೇಲೆ, ಪ್ಯಾಕ್ ಮಾಡಿ ಸೀಲ್ ಮಾಡಿರುವ ಬಟ್ಟೆಯ ಮೇಲೆ ನನ್ನ ಹಾಗೂ ಪಂಚರ ಸಹಿಗಳು ಇರುವುದಿಲ್ಲ ಎಂದರೆ ಸರಿ ನ್ಯಾಯಾಲಯದ ಮುಂದೆ ಇರುವ ಚೀಟಿಯಲ್ಲಿ ಇಲ್ಲ ಆದರೆ ಸಹಿಗಳನ್ನು ಪಡೆದಿರುವ ಪ್ರತಿಯನ್ನು ನನ್ನ ಕಡತದಲ್ಲಿರುತ್ತದೆ. (ತನಿಖಾಧಿಕಾರಿಯವರ ಕಡತದಲ್ಲಿ ಸಹಿ ಮಾಡಿರುವ ಸ್ಲಿಪ್ ಇರುತ್ತದೆ.) ಸೀಲಿನ ಮಾದರಿಯನ್ನು ಪಂಚರಿಗೆ ಕೊಟ್ಟಿರುವುದಿಲ್ಲ ಆದರೆ ಅದು ಠಾಣೆಯಲ್ಲಿರುತ್ತದೆ ಅದನ್ನು ತೋರಿಸಿ ಸೀಲ್ ಮಾಡಲಾಗಿರುತ್ತದೆ. ಈ ವಿಚಾರವನ್ನು ಮಹಜರಿನಲ್ಲಿ ಬರೆದಿರುವುದಿಲ್ಲ ಆದರೆ ಪಂಚರ ಸಮಕ್ಷಮ ಸೀಲ್ ಮಾಡಿರುವ ಬಗ್ಗೆ ನಮೂದಾಗಿರುತ್ತದೆ. ಸದರಿ ವಿಚಾರವನ್ನು ಮಹಜರಿನಲ್ಲಿ ನಮೂದು ಮಾಡಿಲ್ಲ.

ತನಿಖೆಯ ಸಮಯದಲ್ಲಿ ಮಹಿಳಾ ಪೊಲೀಸ್ ಸಿಬ್ಬಂದಿಯನ್ನು ಕರೆದುಕೊಂಡು ಹೋದ ಬಗ್ಗೆ ನೆನಪಿಲ್ಲ. ನೊಂದ ಮಹಿಳೆಯ ಹೇಳಿಕೆಯನ್ನು ನಾನೇ ಖುದ್ದಾಗಿ ಪಡೆದಿರುತ್ತೇನೆ. ಯಾವುದೇ ಮಹಿಳಾ ಪಿಸಿಯವರಿಂದ ಪಡೆದಿಲ್ಲ. ಸ್ಥಳದಲ್ಲಿ ಮುಮಾ-1 ರಿಂದ 3 ಗಳಿದ್ದ ಬಗ್ಗೆ ವಸ್ತುಗಳ ಮೇಲೆ ಯಾವುದೇ ಗುರುತು ಮಾಡಿಲ್ಲ, ಜಪ್ತಿ ಮಾಡುವ ಸಮಯದಲ್ಲಿ ಪಂಚರ ಸಮಕ್ಷಮ ಮಾಡಿರುತ್ತೇನೆ. ನಿಪಿ-3 ನಕಾಶೆಯಲ್ಲಿ ಕೃತ್ಯ ನಡೆದ ಸ್ಥಳದ ಬಗ್ಗೆ ಬರೆದಿಲ್ಲ

ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗದೇ ಠಾಣೆಯಲ್ಲಿ ಕುಳಿತು ನಿಪಿ-3 ನ್ನು ಸೃಷಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-3 ರಲ್ಲಿ ಎರಡು ಬಣ್ಣದ ಇಂಕಿನಲ್ಲಿ ಬರವಣಿಗೆ ಇರುತ್ತದೆ ಎಂದರೆ ಸರಿ. ನಿಪಿ-3ನ್ನು ತಯಾರು ಮಾಡಿದವರ ಸಹಿ ಇಲ್ಲ ಎಂದರೆ ಸರಿ. ಸಾಕ್ಷಿ ನಾನು ಹೇಳಿದ ರೀತಿ ನನ್ನ ಸಿಬ್ಬಂದಿಯವರು ತಯಾರು ಮಾಡಿರುತ್ತಾರೆ.

ನಿಪಿ-2 ನ್ನು ಒಂದೇ ಪುಟದಲ್ಲಿ ಮಾಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಫಾರ್ಮೇಟ್ ನಲ್ಲಿ ಜಾಗ ಇಲ್ಲದ ಕಾರಣ ಬೇರೆ ಪುಟದಲ್ಲಿ ಮಾಡಿರುತ್ತೇನೆ. ನಿಪಿ-2 ನ್ನು ಠಾಣೆಯಲ್ಲಿ ಬರೆದಿರುತ್ತೇನೆ ಸ್ಥಳಕ್ಕೆ ಹೋಗಿ ಮಾಡಿಲ್ಲ ಎಂದರೆ ಸರಿಯಲಲ. ಮಹಜರ್ ಬರೆದವರ ಸಹಿ ಇಲ್ಲ ಎಂದರೆ ಸರಿ. ನಾನು ಹೇಳಿದಂತೆ ನನ್ನ ತನಿಖಾ ಸಹಾಯಕರು ಬರೆದಿರುತ್ತಾರೆ. ಆ ರೀತಿ ಒಕ್ಕಣೆ ಮಹಜರಿನಲ್ಲಿ ಇಲ್ಲ ಎಂದರೆ ಸರಿ.

ಎಫ್ ಎಸ್ ಎಲ್ ಗೆ ಮುಮಾ-1 ಮತ್ತು 2 ಕಳುಹಿಸಿ ವರದಿ ಪಡೆಯಲು ಯಾವುದೇ ಸಾಕ್ಷ್ಯಾದಾರಗಳು ಇರಲಿಲ್ಲ. ಮುಮಾ-2 ಆರೋಪಿಯ ಚಪ್ಪಲಿ ಎಂದು ನಮೂದು ಮಾಡಿರುವುದಿಲ್ಲ. ನೊಂದ ಮಹಿಳೆಯು ಆರೋಪಿಯು ಮಾನಭಂಗ ಮಾಡುವ ಸಮಯದಲ್ಲಿ ಚಪ್ಪಲಿಗಳನ್ನು ನೋಡಿ ಗುರುತಿಸಿರುತ್ತಾರೆ. ಇದಾದ ನಂತರ ಆರೋಪಿಯವರ ಚಪ್ಪಲಿಯ ಸೈಜ್ ಮತ್ತು ಅಮಾನತುಪಡಿಸಿಕೊಂಡ ಚಪ್ಪಲಿ ಒಂದೇ ಇದೆ ಎಂದು ಪರೀಕ್ಷೆ ಮಾಡಿಸಿರುವುದಿಲ್ಲ. ಆರೋಪಿಯ ಸ್ವ ಇಚ್ಛಾ ಹೇಳಿಕೆ ಪಡೆರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಹೇಳಿಕೆ ನನ್ನ ಕಡತದಲ್ಲಿರುತ್ತದೆ ಆದರೆ ದೋಷಾರೋಪಣಾ ಪತ್ರದ ಜೊತೆ ಹಾಜರುಪಡಿಸಿರುವುದಿಲ್ಲ.

ನೊಂದ ಮಹಿಳೆಯ ನೇಲ್ ಕ್ಲಿಪಿಂಗ್ ನ್ನು ಸಂಗ್ರಹಿಸಲು ಪ್ರಯತ್ನ ಮಾಡಿರುವುದಿಲ್ಲ. ನೊಂದ ಮಹಿಳೆಯನ್ನು ನ್ಯಾಯಾಲಯಕ್ಕೆ ಕಳುಹಿಸಿ ಕಲಂ 164 ರಡಿಯಲ್ಲಿ ಹೇಳಿಕೆ ಪಡೆದಿದ್ದೇನೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಸಾಕ್ಷಿದಾರರ ಹೇಳಿಕೆಯನ್ನು ಪಡೆದಿಲ್ಲ ಅವುಗಳನ್ನು ಕೇಸಿಗೋಸ್ಕರ ಸುಳ್ಳು ಹೇಳಿಕೆಯನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಪಿರ್ಯಾದಿದಾರರು

ಕೊಟ್ಟಿರುವ ಸುಳ್ಳು ದೂರಿನ ಆದಾರದ ಮೇಲೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಕೇಸಿಗೆ ಸಂಬಂಧಪಟ್ಟ ದಾಖಾಲತಿಗಳನ್ನು ಸಂಗ್ರಹಿಸಿದೇ ಎಲ್ಲಾ ದಾಖಲಾತಿಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಕೇಸಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ಹಿಂದೆ ನೋಡಿರುವುದಿಲ್ಲ ಇದೇ ಮೊದಲನೇ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಸರಿಯಾಗಿ ತನಿಖೆ ಮಾಡಿದೇ ಆರೋಪಿ ಮೇಲೆ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಈ ಕೇಸಿಗೂ ಆರೋಪಿಗೂ ಹಾಗೂ ಮುದ್ದೆಮಾಲಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಪ್ರ.,

(ಶೈಲಾ ಬಿ ಎಂ)
ಒಂದನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾಸನ